ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ

# ಕವಿತೆಗಳ ಮೂಲಕ ಉತ್ಕೃಷ್ಟ ಭಾವ ಸೃಷ್ಟಿಸಿದ ಮಲ್ಲಿಗೆ ಕವಿ ಕೆಎಸ್‌ನ

ಬೆಂಗಳೂರು: ದಾಂಪತ್ಯವನ್ನು ಪ್ರತ್ಯೇಕವಾಗಿ, ಮಾಧುರ್ಯಭರಿತವಾಗಿ ವರ್ಣಿಸಿದ ಕೆ.ಎಸ್. ನರಸಿಂಹಸ್ವಾಮಿ ಅವರು ಕನ್ನಡ ಕಾವ್ಯಲೋಕದಲ್ಲಿ ಹೊಸಗಾಳಿಯನ್ನು ಸೃಷ್ಟಿಸಿದರು ಎಂದು ಜ್ಞಾನಪೀಠ ಪುರಸ್ಕೃತ ಡಾ.ಚಂದ್ರಶೇಖರ ಕಂಬಾರ ವರ್ಣಿಸಿದರು.

ಸಾಹಿತ್ಯ ಅಕಾಡೆಮಿ ಹಾಗೂ ಜೈನ್ ವಿಶ್ವವಿದ್ಯಾಲಯದ ಸಹಭಾಗಿತ್ವದಲ್ಲಿ ಆಯೋಜಿಸಿದ್ದ ಕೆಎಸ್ ಎನ್ ಜನ್ಮಶತಮಾನೋತ್ಸವ ಮತ್ತು ಎರಡು ದಿನದ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

ಕಥೆ, ಕಾದಂಬರಿಗಳಿಂದ ಮಾತ್ರ ರಸಾನುಭವ ಸಾಧ್ಯವೆನ್ನುವ ಭಾವನೆ ಹೋಗಲಾಡಿಸಿ, ಕವಿತೆಗಳ ಮೂಲಕ ಉತ್ಕೃಷ್ಟ ಭಾವವನ್ನು ಕೆಎಸ್‌ನ ಸೃಷ್ಟಿಸಿದ್ದರು. ಎಲ್ಲಾ ಭಾವಗಳನ್ನು ಒಂದೆಡೆ ಕಲೆ ಹಾಕಿ ಅರ್ಥಬದ್ಧವಾದ ಸಾಲುಗಳಿಂದ ಭಾವಗೀತೆ ರಚಿಸುವುದು ತುಂಬಾ ಕಷ್ಟ. ಕೆಎಸ್ ಎನ್ ರಚಿಸಿದ ಕಾವ್ಯಗಳ ಸಾಲು ಪರಿಪೂರ್ಣ ಪ್ರೀತಿ ವ್ಯಕ್ತಪಡಿಸುವ ಸಾಲುಗಳಾಗಿಯೇ ಉದ್ಭವವಾಗಿವೆ. ಇದು ಎಲ್ಲರಿಂದಲೂ ಸಾಧ್ಯವಿಲ್ಲ, ದಂಪತಿಗಳಿಗಾಗಿಯೇ ಶುದ್ಧ ಹಾಗೂ ಕೋಮಲವಾದ ಪ್ರೇಮ ಕವಿತೆಗಳನ್ನು ಕೆಎಸ್‌ನ ರಚಿಸುತ್ತಿದ್ದರು ಎಂದು ಬಣ್ಣಿಸಿದರು.

**ಪರಿಶುದ್ಧ ದಾಂಪತ್ಯ ಗೀತೆ**



ಸಾಹಿತಿ ಕಮಲಾ ಹಂಪನಾ ಮಾತನಾಡಿ, ಹೆಣ್ಣಿನ ಸಂಕೋಚ/ಚಂಚಲತೆಯ ಭಾವನೆಯನ್ನು ಕೆಎಸ್ ಎನ್ ರಂತೆ ಇನ್ನಾರೂ ವ್ಯಕ್ತಪಡಿಸಿಲ್ಲ. ಕಾವ್ಯಗಳಲ್ಲಿ ಸಂಜ್ಞೆಗಳನ್ನು ಬಳಸುವ ಅವರ ಶೈಲಿಯಿಂದ ಹಿಂದಿನ ಕಾಲದಲ್ಲಿ ಗಂಡ-ಹೆಂಡತಿಯರಿಗೆ ಮಾತನಾಡಲು ಎಷ್ಟೊಂದು ಅಡೆತಡೆಗಳು ಇರುತ್ತಿದ್ದವು ಎನ್ನುವುದನ್ನು ಸೂಚಿಸುತ್ತಿತ್ತು. ನನ್ನ ಕವಿತೆಗಳು ಪ್ರೇಮಗೀತೆಗಳಲ್ಲ, ಪರಿಶುದ್ಧ ದಾಂಪತ್ಯಗೀತೆಗಳು ಎನ್ನುತ್ತಿದ್ದರು. ಯುವಸಮೂಹ ಅವರ ಕಾವ್ಯದ ಮಾಧುರ್ಯ ಸವಿಯುವುದರೊಂದಿಗೆ ಅವರ ಕವಿತೆಗಳನ್ನು ಹೇಳುವ ಕಾರ್ಯಕ್ರಮಗಳ ಆಯೋಜನೆಯಾಗಬೇಕು ಎಂದು ಆಶಿಸಿದರು.

ವಿಮರ್ಶಕ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ, ಟಿ.ಎಸ್. ನಾಗಾಭರಣ, ಎಂ.ವಿ. ವೆಂಕಟೇಶ ಮೂರ್ತಿ, ಶಾಂತಿ ಅಯ್ಯರ್ ಮತ್ತಿತರರು ಉಪಸ್ಥಿತರಿದ್ದರು.



**ಮಲ್ಲಿಗೆ ಕವಿಗೆ ಪುಷ್ಪಾರ್ಚನೆ . . .** ಕೆ.ಎಸ್.ನರಸಿಂಹಸ್ವಾಮಿ ಅವರ ಜನ್ಮಶತಮಾನೋತ್ಸವ ಮತ್ತು ವಿಚಾರ ಸಂಕಿರಣದಲ್ಲಿ ಕೆಎಸ್‌ನ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದ ಡಾ.ಚಂದ್ರಶೇಖರ ಕಂಬಾರ, ಕಮಲಾ ಹಂಪನಾ, ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ಮತ್ತಿತರರು.